## ಪ್ರಾರ್ಥನೆ

# ತ್ರಿವೇಣೀ ದಶಕ ಸ್ತೋತ್ರಮ್ - ೧

**ಮುಕ್ತಾಮಯಾಲಂಕೃತಮುದ್ರವೇಣೀ**
**ಭಕ್ತಾಭಯತ್ರಾಣಸುಬದ್ಧವೇಣೀ ।**
**ಮತ್ತಾಲಿಗುಂಜನ್ಮಕರಂದವೇಣೀ**
**ಶ್ರೀಮತ್ಪ್ರಯಾಗೇ ಜಯತಿ ತ್ರಿವೇಣೀ ॥ ೧ ॥**

ಮುತ್ತಿನ ಮಣಿಗಳಿಂದ ಅಲಂಕಾರಗೊಂಡಿದೆಯೋ ಎಂಬಂತಿರುವ ಜಲಪ್ರವಾಹವುಳ್ಳ, ಭಕ್ತರಿಗೆ ಅಭಯವನ್ನು ಕೊಟ್ಟು ರಕ್ಷಿಸುವೆನೆಂಬ ಭಾವದಿಂದ ಸುಂದರವಾಗಿ ಬೆಸೆದುಕೊಂಡಿರುವ ನದಿಗಳುಳ್ಳ, ಉನ್ಮತ್ತವಾದ ದುಂಬಿಗಳ ಝೇಂಕಾರದಿಂದ ಅನುರಣಿಸುವ ಮಕರಂದ ತುಂಬಿದ ನದಿಗಳ ತ್ರಿವೇಣೀ ಸಂಗಮವು ಶ್ರೀ ಪ್ರಯಾಗದಲ್ಲಿ ವಿರಾಜಿಸುತ್ತಿದೆ.

**ಲೋಕತ್ರಯೈಶ್ವರ್ಯನಿದಾನವೇಣೀ**
**ತಾಪತ್ರಯೋಚ್ಚಾಟನಬದ್ಧವೇಣೀ ।**
**ಧರ್ಮಾರ್ಥಕಾಮಾಕಲನೈಕವೇಣೀ**
**ಶ್ರೀಮತ್ಪ್ರಯಾಗೇ ಜಯತಿ ತ್ರಿವೇಣೀ ॥ ೨ ॥**

ಮೂರುಲೋಕಗಳಲ್ಲಿನ ಐಶ್ವರ್ಯಕ್ಕೆ ಮೂಲನೆಲೆಯಾದ, ಜೀವಿಗಳ ತಾಪತ್ರಯಗಳನ್ನು ದೂರಮಾಡಲು ಒಂದೆಡೆ ಸೇರಿರುವ ನದಿಗಳುಳ್ಳ, ಧರ್ಮ-ಅರ್ಥ-ಕಾಮಗಳ ಸಂಗಮದಂತಿರುವ ತ್ರಿವೇಣೀ ಸಂಗಮವು ಶ್ರೀ ಪ್ರಯಾಗದಲ್ಲಿ ವಿರಾಜಿಸುತ್ತಿದೆ.

**ಮುಕ್ತಾಂಗನಾಮೋಹನಸಿದ್ಧವೇಣೀ**
**ಭಕ್ತಾಂತರಾನಂದಸುಬೋಧವೇಣೀ ।**
**ವೃತ್ತ್ಯಂತರೋದ್ವೇಗವಿವೇಕವೇಣೀ**
**ಶ್ರೀಮತ್ಪ್ರಯಾಗೇ ಜಯತಿ ತ್ರಿವೇಣೀ ॥ ೩ ॥**

ಮುಕ್ತಿಯು ದೊರೆತೇ ದೊರೆಯುವುದು ಎಂಬ ನಿಶ್ಚಯವುಳ್ಳ, ಭಕ್ತರ ಹೃದಯದಲ್ಲಿ ಆನಂದಾನುಭವವನ್ನುಂಟುಮಾಡುವ, ಲೌಕಿಕವಾದ ಉದ್ವೇಗವನ್ನುಂಟುಮಾಡುವ ಚಿತ್ತ ಇಂದ್ರಿಯಾದಿ ವೃತ್ತಿಗಳ ನಡುವೆ ವಿವೇಕ ಎಂಬ ವೃತ್ತಿಯೊಡಗೂಡಿದ ತ್ರಿವೇಣೀ ಸಂಗಮವು ಶ್ರೀ ಪ್ರಯಾಗದಲ್ಲಿ ವಿರಾಜಿಸುತ್ತಿದೆ.

**ದುಗ್ಧೋದಧಿಸ್ಫೂರ್ಜತ್ ಸುಭದ್ರವೇಣೀ**
**ನೀಲಾಭ್ರಶೋಭಾಲಲಿತಾ ಚ ವೇಣೀ ।**
**ಸ್ವರ್ಣಪ್ರಭಾಭಾಸುರಮಧ್ಯವೇಣೀ**
**ಶ್ರೀಮತ್ಪ್ರಯಾಗೇ ಜಯತಿ ತ್ರಿವೇಣೀ ॥ ೪ ॥**

ಕ್ಷೀರಸಮುದ್ರದಂತಹ ಹೊಳಪನ್ನು ಹೊಂದಿರುವ, ಸುಮಂಗಳಕರವಾದ, ಕಪ್ಪು ಮೋಡದ ಕಾಂತಿಯಿಂದ ಸುಂದರವಾಗಿರುವ, ಸುವರ್ಣದ ಕಾಂತಿಯಂತೆ ಬೆಳಗುತ್ತಿರುವ, ಚಿತ್ತಾಕರ್ಷಕವಾದ ತ್ರಿವೇಣೀ ಸಂಗಮವು ಶ್ರೀ ಪ್ರಯಾಗದಲ್ಲಿ ವಿರಾಜಿಸುತ್ತಿದೆ.

**ವಿಶ್ವೇಶ್ವರೋತ್ತುಂಗಕಪರ್ದಿವೇಣೀ**
**ವಿರಿಂಚಿವಿಷ್ಣುಪ್ರಣತೈಕವೇಣೀ ।**
**ತ್ರಯೀ ಪುರಾಣಾಂ ಸುರಸಾರ್ಥವೇಣೀ**
**ಶ್ರೀಮತ್ಪ್ರಯಾಗೇ ಜಯತಿ ತ್ರಿವೇಣೀ ॥ ೫ ॥**

ವಿಶ್ವೇಶ್ವರನ ತಲೆಯ ಮೇಲಿನ ಉತ್ತುಂಗವಾದ ಜಟೆಯಲ್ಲಿ ವಿರಾಜಮಾನವಾಗಿರುವ, ಬ್ರಹ್ಮ ವಿಷ್ಣು ಮೊದಲಾದವರ ನಮಸ್ಕಾರವನ್ನು ಸ್ವೀಕರಿಸುವ ಏಕೈಕ ಜಲಸಂಗಮವಾದ, ಮೂರು ಲೋಕಗಳ ದೇವತೆಗಳ ಸಮೂಹದಿಂದ ಕೂಡಿರುವ ತ್ರಿವೇಣೀ ಸಂಗಮವು ಶ್ರೀ ಪ್ರಯಾಗದಲ್ಲಿ ವಿರಾಜಿಸುತ್ತಿದೆ.

— ಶ್ರೀ ಶಂಕರಾಚಾರ್ಯ

## ಸೂಕ್ತಿಪ್ರಭ



**ಧ**ನ, ಜನ, ಯೌವನಗಳಿಂದ ಗರ್ವಪಡಬೇಡ. ಕಾಲವು ಇವೆಲ್ಲವನ್ನೂ ಕ್ಷಣದಲ್ಲಿ ನಾಶ ಮಾಡುವುದು. ಮಾಯಾಮಯವಾದ ಈ ಅಖಿಲ ಜಗತ್ತನ್ನು ತೊರೆದು, ಪರಬ್ರಹ್ಮನ ಸ್ವರೂಪವನ್ನು ತಿಳಿದುಕೊಂಡು ಅದರಲ್ಲಿ ಪ್ರತಿಷ್ಠಿತನಾಗು. — ಶ್ರೀ ಶಂಕರಾಚಾರ್ಯ



**ಕ**ರಿ ಘನ, ಅಂಕುಶ ಕಿರಿದೆನ್ನಬಹುದೆ? ಬಾರದಯ್ಯಾ. ಗಿರಿ ಘನ, ವಜ್ರ ಕಿರಿದೆನ್ನಬಹುದೆ? ಬಾರದಯ್ಯಾ. ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೆ? ಬಾರದಯ್ಯಾ. ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೆ? ಬಾರದಯ್ಯ ಕೂಡಲಸಂಗಮದೇವಾ. — ಬಸವಣ್ಣ



**ಸೇ**ವೆ ಮಾಡುವವನು ಮುಕ್ತಿಯ ಮಾರ್ಗವನ್ನು ಕಂಡುಕೊಂಡಿರುತ್ತಾನೆ. ಅವನು ಗಿಡವೊಂದನ್ನು ನೆಟ್ಟು, ಕೆಲವು ವರ್ಷಗಳಾದ ಮೇಲೆ ನೆರಳು, ಹೂ, ಹಣ್ಣುಗಳನ್ನು ಪಡೆಯುವ ವ್ಯಕ್ತಿಯಂತೆ. ಸೇವಾಕಾರ್ಯದ ಫಲ ಇದೇ ರೀತಿ. ಸಹಾಯದ ಅಗತ್ಯವಿದ್ದವರಿಗೆ ಸಹಾಯ ಮಾಡುವವನ ಆನಂದವೂ ಇದೇ ರೀತಿ. ಶ್ರೇಷ್ಠವಾದ ನಿರ್ವಾಣವೂ ಇದೇ ರೀತಿ. — ಭಗವಾನ್ ಬುದ್ಧ